# ಜಿಲ್ಲಾ ನಗರಾಭಿವೃದ್ಧಿ ಕೋಶ,ಉ.ಕ.ಕಾರವಾರ

## ಜಿಲ್ಲಾಧಿಕಾರಿಗಳ ಕಾರ್ಯಾಲಯ,ಕಾರವಾರ

ನಂ.ಪ್ರ ಇ/ಪ್ರಾಪ್ರಕ/ಕಾ/308/2007-08 ದಿನಾಂಕ : 31-05-2008

## ಟೆಂಡರ ಪ್ರಕಟಣೆ

,ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರ ಇವರು ಈ ಮೂಲಕ ಯಾವತ್ತೂ ರಜಿಸ್ಟರ್ಡ ಗುತ್ತಿಗೆದಾರರಿಗೆ ತಿಳಿಯಪಡಿಸುವದೆನೆಂದರೆ ಪ್ರವಾಸೋದ್ಯಮ ಇಲಾಖೆ ಅನುದಾನದಲ್ಲಿ ಈ ಕೆಳಗೆ ನಮೂದಿಸದ ಕಾಮಗಾರಿಗೆ ಮೊಹರಾದ 2 ಲಕೋಟೆ ಪದ್ದತಿಯಲ್ಲಿ ಒಂದು ತಾಂತ್ರಿಕ ಬಿಡ್,ಎರಡು ಆರ್ಥಿಕ ಬಿಡ್ ಗಳನ್ನೊಳಗೊಂಡಿರುವಂತೆ ಎಂದು ನಮೂದಿಸಲಾದ ಲಕೋಟೆಗಳನ್ನು ಪ್ರತ್ಯೇಕ ಮೊಹರು ಮಾಡಿ ಇವುಗಳನ್ನು ಮತ್ತೊಂದು ಮೊಹರಾದ ಲಕೋಟೆಯಲ್ಲಿ ಕಾಮಗಾರಿಯ ಹೆಸರನ್ನು ನಮೂದಿಸಿ ಈಕಚೇರಿಯಲ್ಲಿ ದಿನಾಂಕ:5-7-2008 ರ ಸಂಜೆ 4.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು. ಅಂದೇ ಸಂಜೆ 5.00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರಯಲಾಗುವದು

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯದಿನಾಂಕ: 4-7-2008 (ಸಂಜೆ 5.30 ಗಂಟೆಯವರೆಗೆ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ: 5-7-2008(ಸಂಜೆ 4.00 ಗಂಟೆಯವರೆಗೆ)
3. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ತೆರೆಯುವ ದಿನಾಂಕ: 5-7-2008 (ಸಂಜೆ 5.00 ಗಂಟೆಗೆ)

ಮೇಲ್ಕಂಡ ದಿನಾಂಕಗಳು ಸಾರ್ವಜನಿಕ ರಜೆಯ ದಿನಗಳಾಗಿದ್ದರೆ ಮುಂದಿನ ಕಚೇರಿಯ ಕೆಲಸದ ದಿನಗಳನ್ನು ಪರಿಗಣಿಸಲಾಗುವದು,

| ಅ. ನಂ | ಕಾಮಗಾರಿ ವಿವರ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ ( ರೂ ಗಳಲ್ಲಿ) | ಕೆಲಸದ ಅವಧಿ | ಗುತ್ತಿಗೆ ದಾರರ ದರ್ಜೆ | ಟೆಂಡರು ಮಾದರಿ | ಟೆಂಡರು ಫಾರಂ ಮೊತ್ತ ( ರೂ ಗಳಲ್ಲಿ) |
|---|---|---|---|---|---|---|---|
| 1 | ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕು ಶ್ರೀ ಸೊಂದಾ ಸ್ವರ್ಣವಲ್ಲಿ ಯಲ್ಲಿ ಯಾತ್ರಿ ನಿವಾಸ ನಿರ್ಮಿಸುವದು | 50.00ಲಕ್ಷ | ರೂ.50,000/- | 6ತಿಂಗಳು(ಮಳೆಗಾಲ ಹೊರತು ಪಡಿಸಿ) | 1ನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂವಾರು | ರೂ.5,000/- |

**ಅ . ತಾಂತ್ರಿಕ ಬಿಡ್ ಲಕೋಟೆಯಲ್ಲಿ ಸಲ್ಲಿಸಬೇಕಾದ ವಿವರಗಳು**

1) ಕಾಮಗಾರಿಯನ್ನು ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲು ಅಗತ್ಯವಿರುವ ಯಂತ್ರೋಪಕರಣಗಳ ಮಾಲೀಕತ್ವದ /ಕರಾರು ಪತ್ರದ ದೃಡೀಕರಣ ಪ್ರಮಾಣ ಪತ್ರ..

2) ಕಳೆದ 3 ವರ್ಷಗಳಲ್ಲಿ ಈ ತರಹನಾದ ಶೇಕಡಾ 50 ರಷ್ಟು ಮೊಬಲಗಿನ ಕಾಮಗಾರಿಗಳನ್ನು ಸಂಪೂರ್ಣವಾಗಿ ನಿರ್ವಹಿಸಿರುವ ದೃಡೀಕರಣ ಪ್ರಮಾಣ ಪತ್ರ

3) ಗುತ್ತಿಗೆದಾರರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರವಾರ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ.ಯನ್ನು ಸಲ್ಲಿಸುವದು

4) ಮಾರಾಟಕರ,ಆದಾಯಕರಗಳನ್ನು ತೀರುವಳಿಗೊಳಿಸಿರುವ ಪ್ರಮಾಣ ಪತ್ರಗಳನ್ನು ಸಕ್ಷಮ ಅಧಿಕಾರಿಗಳಿಂದ ಪಡೆದು ಸಲ್ಲಿಸುವದು.

5) ಗುತ್ತಿಗೆ ದಾರರ ನೊಂದಣೆ ಪ್ರಮಾಣ ಪತ್ರದ ದೃಡೀಕೃತ ಪ್ರತಿ.

**ಬ . ಆರ್ಥಿಕ ಬಿಡ್ ಲಕೋಟೆಯಲ್ಲಿ ಸಲ್ಲಿಸಬೇಕಾದ ವಿವರಗಳು**

1) ಗುತ್ತಿಗೆದಾರರು ಟೆಂಡರು ನಮೂನೆಯಲ್ಲಿ ದರಗಳನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸತಕ್ಕದ್ದು.

2) ನಮೂದಿಸಿರುವ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರಬೇಕು.

## ಶರ್ತುಗಳು

1) ಗುತ್ತಿಗೆದಾರರು, 2007-08 ನೇ ಸಾಲಿನ ಗುತ್ತಿಗೆ ನೊಂದಾವಣಿ ಪ್ರಮಾಣ ಪತ್ರ,ಹಾಗೂ ತೆರಿಗೆ ನೋಂದಣಿ ಪತ್ರ,ವನ್ನು ಟೆಂಡರು ಸಂಗಡ ನೀಡುವುದು.

2) ಗುತ್ತಿಗೆದಾರರು ಕಾಮಗಾರಿಯ ಸ್ಥಳ ಪರಿಶೀಲಿಸಿದ ನಂತರವೇ ಟೆಂಡರ ಸಲ್ಲಿಸತಕ್ಕದ್ದು.

3) ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿ ತೆಗೆಯತಕ್ಕದ್ದು. [ಕಾಮಗಾರಿಯ ಪೂರ್ವದಲ್ಲಿ, ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ]

4) ಗುತ್ತಿಗೆದಾರರು ಟೆಂಡರಿನಲ್ಲಿ ಇಟ್ಟ ಅವಧಿಯಲ್ಲಿ ಕಾಮಗಾರಿ ಪೂರ್ತಿಗೊಳಿಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದುಗೊಳಿಸಿ 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು. ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.

5) ಕಾಮಗಾರಿಗಳ ನಿರ್ವಹಣೆಗೆ ಅಗತ್ಯವಿರುವ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಅವರ ಸ್ವಂತ ವೆಚ್ಚದಲ್ಲಿ ಖರೀದಿರುವದು ಮತ್ತು ಸದ್ರಿ ಸಾಮಾಗ್ರಿಗಳಿಗೆ ಸಂಬಂಧಿಸಿದ ಅಗತ್ಯ ಗುಣ ನಿಯಂತ್ರಣ ಫಲಿತಾಂಶಗಳ ದೃಢೀಕರಣ ಪತ್ರವನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಪಡೆದು ಸಲ್ಲಿಸುವದು.

6) ಕಾಮಗಾರಿಯನ್ನು ಸಹಾಯಕ ಕಮೀಶನರ್ ಶಿರಸಿ ರವರ ಪರಿಶೀಲನೆಯ ನಂತರವೇ ಬಿಲ್ಲನ್ನು ಪಾವತಿಸಲಾಗುವದು.

7) .ಕಾಮಗಾರಿಯ ಮುಕ್ತಾಯದ ನಂತರ ನಿರ್ವಹಣಾ ಅವಧಿ 2 ವರ್ಷ ಇದ್ದು, ಗುಣಮಟ್ಟವನ್ನು ಪರಿಶೀಲಿಸಿ ಭದ್ರತಾ ಠೇವಣಿ ಮತ್ತು ಟೆಂಡರನೊಂದಿಗೆ ಇಟ್ಟ ಮುಂಗಡ ಠೇವಣಿ ಹಿಂತಿರುಗಿಸಲಾಗುವುದು.

8). ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಕಾಮಗಾರಿ ಸ್ಥಳದಲ್ಲಿ ಅಳವಡಿಸತಕ್ಕದ್ದು.

9). ಈ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರವಾರ ಅಥವಾ ವೈಬಸೈಟ್ www.karwarcity.gov.in ರಲ್ಲಿ ಪಡೆದುಕೊಳ್ಳಬಹುದಾಗಿದೆ.

10) ತಾಂತ್ರಿಕ ಬಿಡ್ ನಲ್ಲಿ ಅರ್ಹರಾದವರ ಟೆಂಡರ ಮಾತ್ರ ( ಆರ್ಥಿಕ ಬಿಡ) ತೆರೆಯಲಾಗುವದು.

ಸಹಿ ಇದೆ.
ಮುನೀಷ್ ಮೌದ್ಗಿಲ್ ಭಾ ಆ.ಸೇ.
ಜಿಲ್ಲಾಧಿಕಾರಿಗಳು
ಉತ್ತರ ಕನ್ನಡ ಕಾರವಾರ